# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/2870/2021
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:16/04/2022.
19

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಪರಶುರಾಮ ಸಿದ್ದಪ್ಪ ಹುಡೇದ, ಬಿನ್ ಸಿದ್ದಪ್ಪ ಹುಡೇದ, ಪ್ರಥಮ ದರ್ಜೆ ಸಹಾಯಕ, ತಹಶೀಲ್ದಾರವರ ಕಚೇರಿ, ಬಸವನಬಾಗೇವಾಡಿ, ವಿಜಯಪುರ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ವಿಜಯಪುರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರು ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಪರಶುರಾಮ ಸಿದ್ದಪ್ಪ ಹುಡೇದ, ಬಿನ್ ಸಿದ್ದಪ್ಪ ಹುಡೇದ, ಪ್ರಥಮ ದರ್ಜೆ ಸಹಾಯಕ, ತಹಶೀಲ್ದಾರ ಕಚೇರಿ, ಬಸವನಬಾಗೇವಾಡಿ, ವಿಜಯಪುರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಸಚೀನ, ಬಿನ್ ಶಿವಾಜಿ ಬೊಂಬಲೆ, ಸಾ: ವಸಂತ ನಗರ, ಅಡವಿ ಶಂಕರಲಿಂಗ ಗುಡಿಯ ಬಳಿ, ದರ್ಗಾ ಜೈಲ್ ರೋಡ, ವಿಜಯಪುರ ನಗರ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ವಿಜಯಪುರ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ: 07/2019** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

   i. ವಿಜಯಪುರ ಜಿಲ್ಲೆ, ಕೋಲಾರ ತಾಲ್ಲೂಕಿನ ಕೋಲಾರ ಹೋಬಳಿಯ ತೆಲಗಿ ಗ್ರಾಮದ ಶೇತ್ಗಿ ಜಮೀನು ರಿ.ಸ.ನಂ. 59/*/1 ನೇದ್ದರಲ್ಲಿ 17-ಗುಂಟೆ ಜಮೀನಿನ ಮಾಲೀಕರಾದ ಶ್ರೀ. ವಿದ್ಯಾನಂದ ತಂದೆ ಗುರಬಸಯ್ಯಾ ವಸ್ತ್ರದ ಸಾ:ವಿಜಯಪುರ, ಇವರು ಶೇತ್ಗಿ ಜಮೀನನ್ನು (ವಾಣಿಜ್ಯ ಉದ್ದೇಶಕ್ಕಾಗಿ) ಭೂ ಪರಿವರ್ತನೆ ಮಾಡಿಸುವ ಸಲುವಾಗಿ ದಿನಾಂಕ:12/08/2016 ರಂದು ದೂರುದಾರರಿಗೆ ಮೊಕ್ತಿಯಾರ್ ನಾಮೆ (ಪತ್ರ) ಮಾಡಿಸಿಕೊಟ್ಟಿರುತ್ತಾರೆ. ಅದರಂತೆ ಮೆಲ್ಕಂಡ ತೆಲಗಿ ಗ್ರಾಮದ ಶೇತ್ಗಿ ಜಮೀನು ರಿ.ಸ.ನಂ. 59/*/1 ನೇದ್ದರಲ್ಲಿ 17-ಗುಂಟೆ ಜಮೀನಿನ್ನು (ವಾಣಿಜ್ಯ ಉದ್ದೇಶಕ್ಕಾಗಿ) ಭೂ ಪರಿವರ್ತನೆ

ಮಾಡಿಸುವ ಸಲುವಾಗಿ ದಿನಾಂಕ:18/01/2019 ರಂದು ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಅದರೊಂದಿಗೆ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ, ದಿನಾಂಕ: 11/02/2019ರಂದು ತಹಶೀಲ್ದಾರ್‌ರವರ ಕಚೇರಿ ಬಸವನಬಾಗೇವಾಡಿಯಲ್ಲಿ ಕೊಟ್ಟು ಸ್ವೀಕೃತಿ ಪಡೆದಿರುತ್ತಾರೆ. ನಂತರ ದಿನಾಂಕ:16/02/2019 ರಂದು ದೂರುದಾರರು ಮತ್ತು ಅವರ ಅಣ್ಣ ಶ್ರೀ. ಪ್ರಮೋದ, ಇಬ್ಬರೂ ಕೂಡಿ ಬಸವನಬಾಗೇವಾಡಿ ತಹಶೀಲ್ದಾರ್‌ರವರ ಕಚೇರಿಯಲ್ಲಿ ಭೂಪರಿವರ್ತನೆ ಮಾಡುವ ಎದುರುದಾರರನ್ನು (ಕೇಸ್ ವರ್ಕರ್) ಈ ಬಗ್ಗೆ ವಿಚಾರಿಸಲಾಗಿ, ಎದುರುದಾರರು ಜಿಲ್ಲಾಧಿಕಾರಿಗಳು ಸದರಿ ಕೇಸ್ ಫೈಲ್‌ನ್ನು ಅವರ ಕಡೆ ಕಳುಹಿಸಿಕೊಟ್ಟಿದ್ದು, ದೂರುದಾರರಿಗೆ ತಹಶೀಲ್ದಾರ್‌ರವರನ್ನು ಭೇಟಿಯಾಗಲು ತಿಳಿಸಿರುತ್ತಾರೆ. ಅದರಂತೆ ದೂರುದಾರರು ಮತ್ತು ಅವರ ಅಣ್ಣ ತಹಶೀಲ್ದಾರ್‌ರವರನ್ನು ಭೇಟಿಯಾದಾಗ ಅವರು ದಿನಾಂಕ:20/02/2019 ರಂದು ಸ್ಥಳ ಪರಿಶೀಲನೆಗೆ ಬಂದು ಸ್ಥಳ ಪರಿಶೀಲನೆ ಮಾಡಿರುತ್ತಾರೆ. ನಂತರ ದಿನಾಂಕ:30/04/2019ರಂದು ದೂರುದಾರರು ಮತ್ತು ಅವರ ಅಣ್ಣ ಕೂಡಿಕೊಂಡು ಬಸವನಬಾಗೇವಾಡಿ ತಹಶೀಲ್ದಾರ್‌ರವರ ಕಚೇರಿಯಲ್ಲಿ ಭೂಪರಿವರ್ತನೆ ಮಾಡುವ ಎದುರುದಾರರನ್ನು (ಕೇಸ್ ವರ್ಕರ್) ಈ ಬಗ್ಗೆ ವಿಚಾರಿಸಲಾಗಿ, ಎದುರುದಾರರು ದೂರುದಾರರ ಕೆಲಸ ಮಾಡಿಕೊಡುತ್ತೇನೆ ರೂ. 8,000/- ಲಂಚದ ಹಣ ಕೇಳಿದರು, ಆಗ ದೂರುದಾರರು ಅಷ್ಟು ಹಣ ತಂದಿಲ್ಲಾ ಕೆಲಸ ಮಾಡಿಕೊಡಿ ನಂತರ ಕೊಡುತ್ತೇನೆ ಅಂತಾ ಹೇಳಿರುತ್ತಾರೆ. ಆ ಸಮಯದ ಸಂಭಾಷಣೆಯನ್ನು ದೂರುದಾರರು ಗಡಿಬಿಡಿಯಲ್ಲಿ ರೆಕಾರ್ಡ್ ಮಾಡಿರುವುದಿಲ್ಲ. ನಂತರ ಎದುರುದಾರರು ನಾಳೆ ಕಾರ್ಮಿಕರ ದಿನಾಚರಣೆ, ಸರಕಾರಿ ರಜೆ ಇದ್ದು, ದಿನಾಂಕ:01/05/2019ರಂದು ದೂರುದಾರರ ಫೈಲ್‌ನ್ನು ಅಪ್‌ಲೋಡ್ ಮಾಡಿ ಡಿ.ಸಿ. ಸಾಹೇಬರ ಲಾಗಿನ್‌ಗೆ ಕಳುಹಿಸುತ್ತೇನೆ ಅಂತಾ ಹೇಳಿ, ದೂರುದಾರರ ಮತ್ತು ಅವರ ಅಣ್ಣನವರ ಮೊಬೈಲ್ ನಂಬರುಗಳನ್ನು ಪಡೆದಿರುತ್ತಾರೆ.

ii. ನಂತರ ದಿನಾಂಕ: 01/05/2019 ರಂದು ದೂರುದಾರರ ಅಣ್ಣ ಪ್ರಮೋದ ರವರ ಮೊಬೈಲ್ ನಂ. 9060508888ನೇದ್ದಕ್ಕೆ ಎದುರುದಾರರು ಅವರ ಮೊಬೈಲ್ ನಂ. 8310833616ನೇದ್ದರಿಂದ ಕರೆ ಮಾಡಿ, "ವಿಜಯಪುರ ಜಿಲ್ಲೆ, ಕೋಲಾರ ತಾಲ್ಲೂಕಿನ ಕೋಲಾರ ಹೋಬಳಿಯ ತೆಲಗಿ ಗ್ರಾಮದ ಶೇತ್ಕಿ ಜಮೀನು ರಿ.ಸ.ನಂ. 59/*/1 ನೇದ್ದರಲ್ಲಿ 17-ಗುಂಟೆ ಜಮೀನಿನ (ಭೂ ಪರಿವರ್ತನೆ) ಕೆಲಸ ಮಾಡಿ, ನಿಮ್ಮ ಫೈಲ್‌ನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿ ಡಿ.ಸಿ. ಸಾಹೇಬರ ಲಾಗಿನ್‌ಗೆ ಕಳುಹಿಸಿದ್ದೇನೆ ಅಂತಾ ಹೇಳಿರುತ್ತಾರೆ". ನಂತರ ದಿನಾಂಕ: 02/05/2019 ರಂದು ದೂರುದಾರರ ಅಣ್ಣ ಪ್ರಮೋದರವರ ಮೊಬೈಲ್ ನಂ. 9060508888ನೇದ್ದಕ್ಕೆ ಎದುರುದಾರರು ಅವರ ಮೊಬೈಲ್ ನಂ. 8310833616ನೇದ್ದರಿಂದ ಕರೆ ಮಾಡಿ, 'ಅಷ್ಟೆ ಕೊಡ್ರಿ ಸಾರ್, ಅಷ್ಟೆ ಐದೇ ಕೊಡ್ರಿ ಸಾರ್ ಅಂತಾ ಕೇಳಿರುತ್ತಾರೆ', ಅದಕ್ಕೆ ದೂರುದಾರರ ಅಣ್ಣನವರು ಎಷ್ಟು ಸಾರ್

ಅಂತಾ ಕೇಳಿದ್ದಕ್ಕೆ, ಐದೇ ಕೊಡ್ರಿ ಸಾರ್ ಅಂತಾ ಹೇಳಿರುತ್ತಾರೆ, ಅದಕ್ಕೆ ದೂರುದಾರರ ಅಣ್ಣ ಐದು ಸಾವಿರ ರೂಪಾಯಿರೀ? ಅಂತಾ ಅಂದಿದ್ದು, ಅದಕ್ಕೆ ಎದುರುದಾರರು ಐದೇ ಕೊಡ್ರಿ ಹೂಂರಿ, ಅಂತಾ ಹೇಳಿರುತ್ತಾರೆ, ಅದಕ್ಕೆ ದೂರುದಾರರ ಅಣ್ಣ ಸರಿ ಸಾರ್ ಆಯಿತು ಅಂತಾ ಹೇಳಿರುತ್ತಾರೆ". ಈ ಸಂಭಾಷಣೆಯನ್ನು ದೂರುದಾರರ ಅಣ್ಣ ಪ್ರಮೋದ್‌ರವರು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

iii. ದಿನಾಂಕ: 06/05/2019ರಂದು ಬೆಳಿಗ್ಗೆ 09-00 ಗಂಟೆಗೆ ದೂರುದಾರರಿಗೆ ಮತ್ತು ಅವರ ಅಣ್ಣನಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದುದರಿಂದ, ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ವಿಜಯಪುರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 07/2019 ರಲ್ಲಿ ಕಲಂ 7(ಬಿ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದು ಪಡಿ)ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iv. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಅದೇ ದಿನ ಅಂದರೆ 06/05/2019 ಸರ್ಕಾರಿ ಪಂಚರುಗಳಾದ 1) ಶ್ರೀ. ವಿಜಯಕುಮಾರ (ನೆರಳು ಸಾಕ್ಷಿ) 2) ಶ್ರೀ. ಮಲ್ಲಿಕಾರ್ಜುನ, ಅವರುಗಳನ್ನು ಬರಮಾಡಿಕೊಂಡು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಮತ್ತು ಅವರ ಅಣ್ಣನಿಗೂ ಸಹಾ ಪರಿಚಯ ಮಾಡಿಸಿ, ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು ಅದನ್ನು ಓದಿ ಅದರಲ್ಲಿಯ ವಿಷಯವನ್ನು ತಿಳಿದುಕೊಂಡಿದ್ದು, ನಂತರ ಸದರಿ ವಿಷಯವು ನಿಜವೆಂದು ದೂರುದಾರರು ಮತ್ತು ಅವರ ಅಣ್ಣನಿಂದ ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚರ ಸಮಕ್ಷಮ ದೂರುದಾರರ ಅಣ್ಣ ಅವರ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಅದನ್ನು ಪ್ಲೇ ಮಾಡಿ ಪಂಚರುಗಳಿಗೆ ಕೇಳಿಸಿರುತ್ತಾರೆ. ನಂತರ ಡಾಟಾ ಕೇಬಲ್ ಮೂಲಕ ಲ್ಯಾಪ್ ಟಾಪ್‌ಗೆ ಅಳವಡಿಸಿ, ಅದರ ಮೂಲಕ ಸಿಡಿಗಳಿಗೆ ವರ್ಗಾಯಿಸಿರುತ್ತಾರೆ ಹಾಗೂ ಸಂಭಾಷಣೆಯನ್ನು ಲಿಪಿಕರಣ (ಪ್ರತಿಲೇಖನವನ್ನು) ಮಾಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಲಂಚ ನೀಡಲು ತಂದ (ರೂ.500/- ಮುಖಬೆಲೆಯ 10-ನೋಟುಗಳು) ಒಟ್ಟು 5,000/- ರೂ.ನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಸದರಿ ನೋಟುಗಳ ನಂ.ನ್ನು ಮತ್ತು ಮೌಲ್ಯವನ್ನು ಪಂಚ-1 ರವರು ಪರಿಶೀಲಿಸಿ ಹೇಳಿದಂತೆ, ಪಂಚ-2ರವರು ಒಂದು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ.

v. ನಂತರ ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಎರಡೂ ಬದಿಗಳಿಗೆ ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚಸಾಕ್ಷಿ-

2 ರವರು ದೂರುದಾರರ ಅಂಗ ಶೋಧನೆ ಮಾಡಿದ ಮೇಲೆ, ಸದರಿ ಫಿನಾಫ್ತಲೀನ್ ಪೌಡರನ್ನು ಸವರಿದ ಹಣವನ್ನು ಎಣಿಸಿ, ಸದರಿ ಹಣವನ್ನು ದೂರುದಾರರು ಧರಿಸಿದ್ದ ಶರ್ಟಿನ ಎದೆಯ ಮೇಲಿನ ಎಡಕಿನ ಕಿಸೆಯಲ್ಲಿ ಇಟ್ಟಿರುತ್ತಾರೆ. ನಂತರ ಪಂಚ ಸಾಕ್ಷಿ-2 ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ, ಬೇರೆ ಯಾವುದೇ ಸ್ಥಳದಲ್ಲಿ ಇಡದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತನ್ನ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-1 ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ತನಿಖಾಧಿಕಾರಿಗಳು ಎಲ್ಲಾ ಸಿಬ್ಬಂದಿ, ದೂರುದಾರರಿಗೆ ಮತ್ತು ಅವರ ಅಣ್ಣನಿಗೆ ಹಾಗೂ ಪಂಚರಿಗೆ ಸೋಪಿನಿಂದ ಕೈತೊಳೆಯಲು ಸೂಚಿಸಿದ್ದು, ಅದರಂತೆ ಅವರೆಲ್ಲರೂ ಸೋಪಿನಿಂದ ಕೈತೊಳೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರನ್ನು ಬೇಟಿಯಾದಾಗ ಮೊಬೈಲ್‌ನ್ನು ಆನ್ ಮಾಡಿಕೊಂಡು ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿನಾಂಕ: 06/05/2019ರಂದು ಬೆಳಿಗ್ಗೆ 09-40 ಗಂಟೆಯಿಂದ 11-00 ಗಂಟೆಯವರೆಗೆ ವಿಜಯಪುರ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ಉಕ್ತಲೇಖನ ನೀಡಿ ಲ್ಯಾಪ್ ಟಾಪ್ ಮೂಲಕ ಪ್ರಾಯೋಗಿಕ ಪಂಚನಾಮೆಯನ್ನು ಬೆರಳಚ್ಚು ಮಾಡಿಸಿರುತ್ತಾರೆ.

vi. ಅದೇ ದಿನ ಅಂದರೆ ದಿನಾಂಕ: 06/05/2019ರಂದು ವಿಜಯಪುರ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ದೂರುದಾರರಿಗೆ ಮತ್ತು ಅವರ ಅಣ್ಣ (ಪ್ರಮೋದ) ರವರಿಗೆ ಎದುರುದಾರರಿಗೆ ಕರೆ ಮಾಡಲು ತಿಳಿಸಿದಾಗ, ದೂರುದಾರರ ಅಣ್ಣ (ಪ್ರಮೋದ)ರವರು ಅವರ ಮೊಬೈಲ್ ನಂ. 9060508888ನೇದ್ದರಿಂದ ಎದುರುದಾರರ ಮೊಬೈಲ್ ನಂ. 8310833616ನೇದ್ದಕ್ಕೆ ಕರೆ ಮಾಡಿ, ವಿಚಾರಿಸಲಾಗಿ ಎದುರುದಾರರು ಕರೆ ಸ್ವೀಕರಿಸಲಿಲ್ಲ. ನಂತರ ಎದುರುದಾರರು ಪುನ: ವಾಪಸ್ಸು ದೂರುದಾರರ ಅಣ್ಣನ ಮೊಬೈಲ್‌ಗೆ ಕರೆ ಮಾಡಿದಾಗ, ದೂರುದಾರರ ಅಣ್ಣ (ಪ್ರಮೋದ)ರವರು ತಾಳಿಕೋಟೆಗೆ ಬರುವುದಾಗಿ ಹೇಳಿದಾಗ, ಎದುರುದಾರರು ತಾನು ವಿಜಯಪುರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇರುವುದಾಗಿ ಹೇಳಿ, ಅಲ್ಲಿಗೆ ಬರಲು ತಿಳಿಸಿದ್ದು, ಸದರಿ

ಸಂಭಾಷಣೆಯನ್ನು ಪ್ರಮೋದರವರು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿರುತ್ತಾರೆ. ಆಗ ಸಮಯ 11-05 ಗಂಟೆಯಾಗಿತ್ತು.

vii. ಬೆಳಿಗ್ಗೆ ಸುಮಾರು 11-10 ಗಂಟೆಗೆ ಇಲಾಖಾ ವಾಹನದಲ್ಲಿ ದಾಳಿ ತಂಡದವರು, ವಿಜಯಪುರ ಎಸಿಬಿ ಕಚೇರಿಯನ್ನು ಬಿಟ್ಟು, ವಿಜಯಪುರ ಜಿಲ್ಲಾಧಿಕಾರಿಗಳವರ ಕಚೇರಿಯ ವಾಹನ ಪಾರ್ಕಿಂಗ್ ಆವರಣಕ್ಕೆ ಬಂದಾಗ, ದೂರುದಾರರು ಮತ್ತು ಅವರ ಅಣ್ಣ (ಪ್ರಮೋದ)ರವರು ಅವರ ತಮ್ಮ ಕಾರ್‌ನಲ್ಲಿ ಸದರಿ ಸ್ಥಳದ ಹತ್ತಿರ ಬಂದು ಕಾರಿನಲ್ಲಿಯೇ ಎದುರುದಾರರಿಗೆ ಕಾಯುತ್ತಿದ್ದು, ಅವರಿಗೆ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೀಡಿರುತ್ತಾರೆ. ನಂತರ ದೂರುದಾರರ ಅಣ್ಣ ಪ್ರಮೋದರವರು ಎದುರುದಾರರ ಮೊಬೈಲ್‌ಗೆ ಕರೆ ಮಾಡಿದಾಗ, ಅವರು ಕರೆಯನ್ನು ಸ್ವೀಕರಿಸಲಿಲ್ಲ, ನಂತರ ಎದುರುದಾರರೇ ಪುನ: ಪ್ರಮೋದ್ ರವರ ಮೊಬೈಲ್‌ಗೆ ಕರೆ ಮಾಡಿದಾಗ, ಪ್ರಮೋದ್‌ರವರು ನಾವು ನಿಮ್ಮ ಕಚೇರಿಯ ಪಾರ್ಕಿಂಗೆ ಆವರಣದಲ್ಲಿ ಕಾರ್‌ನಲ್ಲಿ ಕುಳಿತಿರುವುದಾಗಿ ಹೇಳಿದಾಗ ಎದುರುದಾರರು ಅಲ್ಲೇ ಬರುವುದಾಗಿ ಹೇಳಿರುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ಎದುರುದಾರರು ದೂರುದಾರರ ಕಾರ್‌ನ ಬಳಿ ಬಂದು ಅವರನ್ನು ನೋಡಿ ಬಾಗಿಲು ತೆರೆದು ಕಾರ್ ಒಳಗಡೆ ಹಿಂದಿನ ಸೀಟಿನಲ್ಲಿ ಕುಳಿತು ಡಿ.ಸಿ. ಆಫೀಸಿಗೆ ಬಂದಿರುವುದಾಗಿ ಹೇಳಿದ್ದು, ಆಗ ಪ್ರಮೋದ ರವರು ತಾಳಿಕೋಟೆಗೆ ಫಂಕ್ಷನ್ ನಿಮಿತ್ತ ಹೊರಟಿರುವುದಾಗಿ ಹೇಳಿ ಹಣ ಕೊಡ್ಲೇನ ಅಂತ ಕೇಳಿದಾಗ, ಎದುರುದಾರರು ಹಾಂ ಎಂದರು, ಆಗ ದೂರುದಾರರು ಅವರ ಕಿಸೆಯಲ್ಲಿದ್ದ ಫಿನಾಫ್ತಲೀನ್ ಪೌಡರ್ ಲೇಪಿತ ಲಂಚದ ಹಣ ರೂ. 5,000/-ಗಳನ್ನು ಕೊಟ್ಟು ಎಣಿಸಿಕೊಳ್ಳಲು ಹೇಳಿದಾಗ, ಎದುರುದಾರರು ನೀವು ಎಣಿಸಿರಲ್ಲಾ ಅಂತ ಹೇಳಿ ಬಲಗೈಯಿಂದ ಹಣ ಪಡೆದು ಎಣಿಸಿಕೊಳ್ಳದೇ ತಮ್ಮ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿರುತ್ತಾರೆ. ಕೂಡಲೇ ದೂರುದಾರರು ಕಾರ್‌ನ ಬಾಗಿಲು ತೆರೆದು ಹೊರಗಡೆ ಬಂದು ಟ್ರಾಪ್ ಸಿಬ್ಬಂದಿಗೆ ಕಾಣುವಂತೆ ಅವರ ತಲೆಯ ಮೇಲೆ ಕೈಯ್ಯಾಡಿಸುವ ಮೂಲಕ ಸೂಚನೆ ನೀಡಿರುತ್ತಾರೆ.

viii. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ದೂರುದಾರರ ಕಾರ್‌ನ ಬಳಿ ಬಂದಾಗ ದೂರುದಾರರು ಕಾರ್‌ನಲ್ಲಿ ಕುಳಿತಿದ್ದ ಎದುರುದಾರರನ್ನು ತೋರಿಸಿ, ಇವರೇ ಲಂಚದ ಹಣ ರೂ. 5,000/- ಗಳನ್ನು ಪಡೆದಿದ್ದು ಎಂದು ಹೇಳಿರುತ್ತಾರೆ ಮತ್ತು ಪಂಚ-1ರವರು ಸಹಾ ನಮ್ಮ ಜೊತೆಯಲ್ಲಿ ಕಾರ್‌ನಲ್ಲಿ ಹಿಂದಿನ ಸೀಟ್‌ನಲ್ಲಿ ಕುಳಿತು ಅಲ್ಲಿ ನಡೆದ ಘಟನೆಯನ್ನು ನೋಡಿರುತ್ತಾರೆ ಹಾಗೂ ದೂರುದಾರರು ಅಲ್ಲಿ ನಡೆದ ಘಟನೆಯ ಬಗ್ಗೆ ತನಿಖಾಧಿಕಾರಿಗಳಿಗೆ ವಿವರವಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಅವರ ಗುರುತಿನ ಚೀಟಿ ತೋರಿಸಿ, ಅವರ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು

ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ದೂರುದಾರರ ಅಣ್ಣ ಪ್ರಮೋದರವರನ್ನು ಸದರಿ ಘಟನೆಯ ಬಗ್ಗೆ ಕೇಳಲಾಗಿ ಅವರು ಸಹಾ ದೂರುದಾರರ ಹೇಳಿಕೆಗೆ ಅನುಸರಿಸಿ ನುಡಿದಿದ್ದಲ್ಲದೇ, ಎದುರುದಾರರು ಕಾರ್ ಒಳಗಡೆ ಹಿಂದಿನ ಸೀಟಿನಲ್ಲಿ ನನ್ನ ಪಕ್ಕ ಕುಳಿತು ಹಣವನ್ನು ಬಲಗೈಯಿಂದ ಪಡೆದು ಎಣಿಸದೇ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿರುವುದನ್ನು ಪಕ್ಕದಲ್ಲೇ ಕುಳಿತು ಕಣ್ಣಾರೆ ನೋಡಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಬಲಗೈ ಬೆರಳುಗಳನ್ನು ಪ್ರತ್ಯೇಕವಾದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎಡಗೈ ಬೆರಳುಗಳನ್ನು ಪ್ರತ್ಯೇಕವಾದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಯಾವುದೇ ಬಣ್ಣಕ್ಕೆ ತಿರುಗಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ಲಂಚದ ಹಣವನ್ನು ಹಾಜರುಪಡಿಸಲು ಸೂಚಿಸಿದಾಗ, ಅವರು ತಮ್ಮ ಶರ್ಟಿನ ಕಿಸೆಯಲ್ಲಿ ಇಟ್ಟಿರುವುದಾಗಿ ತೋರಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ-1ರವರು ಸದರಿ ಲಂಚದ ಹಣ ತೆಗೆದು ಹಾಜರುಪಡಿಸಿದ್ದು, ಪಂಚರು ಸದರಿ ಹಣವನ್ನು ಪರಿಶೀಲಿಸಿದಾಗ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಹಣವನ್ನು ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಗಳು ಲಂಚದ ಹಣವನ್ನು ಇಟ್ಟ ಕಿಸೆಯನ್ನು ಹೊರಮಗ್ಗುಲು ಮಾಡಿ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲೀ ಶರ್ಟಿನ ವ್ಯವಸ್ಥೆ ಮಾಡಿ, ಸದರಿ ಎದುರುದಾರರ ಲಂಚ ಇಟ್ಟ ಕಿಸೆಯನ್ನು ಕೆಂಪು ಶಾಯಿಯಲ್ಲಿ ಗುರುತಿಸಿ ಅದನ್ನು ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂದಪಟ್ಟ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಅವರು ಸದರಿ ದಾಖಲೆಗಳು ಬ.ಬಾಗೇವಾಡಿ ತಹಶೀಲ್ದಾರ್‌ರವರ ಕಚೇರಿಯಲ್ಲಿರುವ ತನ್ನ ಛೇಂಬರ್ ಕೌಂಟರ್‌ನಲ್ಲಿರುವ ಕಪಾಟಿನ ಒಳಗಡೆ ಇಟ್ಟಿರುವುದಾಗಿ ಹೇಳಿರುತ್ತಾರೆ. ಎದುರುದಾರರು ಲಂಚದ ಹಣ ಸ್ವೀಕರಿಸಿದ ಸ್ಥಳವು ವಾಹನ ಪಾರ್ಕಿಂಗ್ ಆವರಣವಾಗಿದ್ದು, ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಲು ಸೂಕ್ತ ಸೌಲಭ್ಯ ಮತ್ತು ಸ್ಥಳಾವಕಾಶ ಇಲ್ಲದೇ ಇರುವುದರಿಂದ ಮತ್ತು ದೂರುದಾರರಿಗೆ ಸಂಬಂಧಿಸಿದ ದಾಖಲೆಗಳು ಬ.ಬಾಗೇವಾಡಿ ತಹಶೀಲ್ದಾರ್‌ರವರ ಕಚೇರಿಯಲ್ಲಿರುವುದರಿಂದ ಸದರಿ ದಾಖಲೆಗಳನ್ನು ವಶಪಡಿಸಿಕೊಂಡು ಪಂಚನಾಮೆಯ ಮುಂದಿನ ಪ್ರಕ್ರಿಯೆಯನ್ನು ಬ.ಬಾಗೇವಾಡಿ ತಹಶೀಲ್ದಾರ್‌ರವರ ಕಚೇರಿಯಲ್ಲಿ ಮುಂದುವರೆಸುವುದಾಗಿ ತಿಳಿಸಿ,

ದಾಳಿ ತಂಡದವರು, ದೂರುದಾರರು, ಪಂಚರು ಮತ್ತು ಎದುರುದಾರರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಕೂರಿಸಿಕೊಂಡು 11-55 ಗಂಟೆಗೆ ಮನಗೂಳಿ ಮಾರ್ಗವಾಗಿ ಬ.ಬಾಗೇವಾಡಿಗೆ ಬಂದು ಮಿನಿ ವಿಧಾನ ಸೌಧದ ನೆಲ ಮಹಡಿಯಲ್ಲಿರುವ ಶಿರಸ್ತೆದಾರರು ಮತ್ತು ಸಿಬ್ಬಂದಿರವರ ರೂಮ್ ನಂ.3ರಲ್ಲಿರುವ ಎದುರುದಾರರ ಚೇಂಬರ್ ಕೌಂಟರ್ ಒಳಗಡೆ ಎಲ್ಲರನ್ನು ಕರೆದುಕೊಂಡು ಹೋಗಿ ಕಪಾಟಿನಲ್ಲಿರುವ ದೂರುದಾರರಿಗೆ ಸಂಬಂಧಿಸಿದ ಕಡತವನ್ನು ಎದುರುದಾರರು ತನಿಖಾಧಿಕಾರಿಗಳಿಗೆ ಕೊಟ್ಟಿದ್ದು ಅದನ್ನು ತನಿಖಾಧಿಕಾರಿಗಳು ಪರಿಶೀಲಿಸಿ, ಅದರಲ್ಲಿನ ದಾಖಲಾತಿಗಳನ್ನು ಜೆರಾಕ್ಸ್ ನಕಲನ್ನು ಮಾಡಿಸಿ, ಶ್ರೀ. ಪ್ರೇಮಸಿಂಗ್ ಗುಜ್ಜು ಪವಾರ, ಗ್ರೇಡ್-2, ತಹಶೀಲ್ದಾರ್ ಬ.ಬಾಗೇವಾಡಿ, ಇವರಿಂದ ಧೃಢೀಕರಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರ ಚೇಂಬರ್ ಕೌಂಟರ್‌ನಲ್ಲಿ ಸ್ಥಳಾವಕಾಶದ ಕೊರತೆ ಇರುವುದರಿಂದ ತನಿಖಾಧಿಕಾರಿಗಳು ಸದರಿ ಕೊಠಡಿಯ ಪಕ್ಕಕ್ಕೆ ಇರುವ ಸಹಾಯಕ ಚುನಾವಣಾಧಿಕಾರಿಗಳ ಪಡಸಾಲೆ ಕೋಣೆ ನಂ.5 ಕ್ಕೆ ಬಂದು, ತನಿಖಾಧಿಕಾರಿಗಳು ದೂರುದಾರರಿಗೆ ಲಂಚ ಕೊಡುವ ಕಾಲದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡ ಮೊಬೈಲ್ ಹಾಜರುಪಡಿಸಲು ತಿಳಿಸಿದಾಗ, ದೂರುದಾರರು ತಮ್ಮ ಮೊಬೈಲ್ ಹಾಜರುಪಡಿಸಿದ್ದು, ಅದನ್ನು ಪಂಚರ ಎದುರಿಗೆ ಪ್ಲೇ ಮಾಡಿ ಕೇಳಿಸಿ, ನಂತರ ಮೊಬೈಲ್‌ನಲ್ಲಿರುವ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ 2-ಸಿಡಿಗಳಿಗೆ ವರ್ಗಾಯಿಸಿರುತ್ತಾರೆ, ನಂತರ ಸದರಿ ಮೊಬೈಲ್‌ನ್ನು ದೂರುದಾರರಿಗೆ ನೀಡಿರುತ್ತಾರೆ.

x. ನಂತರ ತನಿಖಾಧಿಕಾರಿಗಳು ದೂರುದಾರರ ಅಣ್ಣ ಪ್ರಮೋದ ಬೊಂಬಲೆ ರವರಿಗೆ ಎದುರುದಾರರೊಂದಿಗೆ ಮೊಬೈಲ್ ಮೂಲಕ ನಡೆಸಿದ ಸಂಭಾಷಣೆಗಳು ರೆಕಾರ್ಡ್ ಆಗಿರುವ ಮೊಬೈಲ್ ಹಾಜರುಪಡಿಸಲು ತಿಳಿಸಲಾಗಿ, ಪ್ರಮೋದರವರು ತಮ್ಮ ಮೊಬೈಲ್ ಹಾಜರುಪಡಿಸಿದ್ದು, ಅದರಲ್ಲಿ ವಿಜಯಪುರ ಎಸಿಬಿ ಠಾಣೆಯಲ್ಲಿ ಒಮ್ಮೆ ಮತ್ತು ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಯ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಮತ್ತೊಮ್ಮೆ ಮಾತನಾಡಿದ ಸಂಭಾಷಣೆಗಳು ಸದರಿ ಮೊಬೈಲ್‌ನಲ್ಲಿದ್ದು, ಅದನ್ನು ಪಂಚರ ಎದುರಿಗೆ ಪ್ಲೇ ಮಾಡಿ ಕೇಳಿಸಿ, ನಂತರ ಮೊಬೈಲ್‌ನಲ್ಲಿರುವ ಸಂಭಾಷಣೆಗಳನ್ನು ಲ್ಯಾಪ್‌ಟಾಪ್ ಮೂಲಕ 2-ಸಿಡಿಗಳಿಗೆ ವರ್ಗಾಯಿಸಿರುತ್ತಾರೆ, ನಂತರ ಸದರಿ ಮೊಬೈಲ್‌ನ್ನು ದೂರುದಾರರ ಅಣ್ಣ ಪ್ರಮೋದ್‌ರವರಿಗೆ ನೀಡಿರುತ್ತಾರೆ. ತನಿಖಾಧಿಕಾರಿಗಳು ಸದರಿ ಸಿಡಿಗಳನ್ನು ಒಂದು ಕವರ್‌ನಲ್ಲಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ.

xi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "..... ಸದರಿ ಪ್ರಕರಣವು ತೆಲಗಿ ಗ್ರಾಮದ ಜಮೀನು ಭೂಪರಿವರ್ತನೆ ಸಲುವಾಗಿ ಅರ್ಜಿ ಸಲ್ಲಿಸಿದ್ದು, ಆನ್‌ಲೈನ್‌ನಲ್ಲಿ ಬಂದಿರುವುದಿಲ್ಲಾ ಕಾರಣ ಮೆನುವಲ್ ಆಗಿ ಈ

ಕಚೇರಿಗೆ ಅರ್ಜಿ ಸಲ್ಲಿಸಿದ್ದರು, ಸದರಿ ಅರ್ಜಿದಾರರು ಸಲ್ಲಿಸಿರುವ ಪ್ರಕಾರ ಕಾರ್ಯಾಲಯ ಟಿಪ್ಪಣೆ ತಯಾರಿಸಿ ಸಲ್ಲಿಸಿರುತ್ತೇನೆ. ಅದರಂತೆ ಮಾನ್ಯ ತಹಶೀಲ್ದಾರ ಬಸವನ ಬಾಗೇವಾಡಿ ಇವರು ಸ್ಥಳ ತನಿಖೆ ಮಾಡಿ ವರದಿ ತಯಾರಿಸಲು ತಿಳಿಸಿದರು. ನಾನು ತಯಾರಿಸಿ ಮಾನ್ಯ ತಹಶೀಲ್ದಾರ ರುಜುವಿಗೆ ಇಟ್ಟೆ ಸಹಿ ಆಗಿರುತ್ತದೆ. ನಂತರ ಚುಣಾವಣೆ 2019 ಬಂದಿದ್ದು ಆವಾಗ ಆನ್‌ಲೈನ್‌ನಲ್ಲಿ ಚೆಕ್ ಮಾಡಲಾಗಿ ಬಂದಿರುವುದಿಲ್ಲಾ ಚುನಾವಣೆ ಮುಗಿದ ನಂತರ ಬಂದಿದ್ದು ಆವಾಗ ಲಾಗಿನದಲ್ಲಿ ದಾಖಲಿಸಿ ದಿನಾಂಕ:03-05-2019 ರಂದು ಕೆಲಸ ಮುಗಿಸಿ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಕಳುಹಿಸಿರುತ್ತೇನೆ. ಆದರೂ ಅರ್ಜಿದಾರರು ದೂರವಾಣಿ ಮುಖಾಂತರ ಭೇಟಿಯಾಗಬೇಕು ಅಂತಾ ಫೋನ್ ಮಾಡಿರುತ್ತಾರೆ. ದಿನಾಂಕ: 06-05-2019ರಂದು ಫೋನ್ ಮಾಡಿ ಭೇಟಿಯಾಗಬೇಕು ಅಂತಾ ತಿಳಿಸಿದರು ನಾನು ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯಪುರ ಮೀಟಿಂಗ್‌ದಲ್ಲಿ ಇರುತ್ತೇನೆ ಅಂದರೂ ಹೊರಗೆ ಬರಲು ತಿಳಿಸಿದರು, ಆವಾಗ ಬಂದು ಅವರ ಕಾರಿನಲ್ಲಿ ಕರೆದು 5,000/- ರೂ.ಗಳನ್ನು ನನ್ನ ಕಿಸೆಯಲ್ಲಿ ಇಟ್ಟರು ಬೇಡವೆಂದರು ಕೇಳಲಿಲ್ಲ ಕಾರಣ ನನ್ನ ಹೆಸರನ್ನು ಕೆಡಿಸುವ ಸಲುವಾಗಿ ದುರುದ್ದೇಶದಿಂದ ಮೋಸ ಮಾಡಿ ಒತ್ತಾಯಪೂರ್ವಕವಾಗಿ ನನ್ನ ಕಿಸೆಯಲ್ಲಿ ಇವರು ನಾನು ನಿಮ್ಮ ಕೆಲಸ ಯಾವುದೇ ಬಾಕಿ ಇರುವುದಿಲ್ಲಾ ಅಂತಾ ತಿಳಿಸಿದರು ಕೇಳಲಿಲ್ಲ. ಸದರಿ ದುರುದ್ದೇಶದಿಂದ ನನ್ನ ಕಿಸೆಯಲ್ಲಿ 5000/- ರೂ. ಹಣವನ್ನು ಇಟ್ಟಿರುತ್ತಾರೆ ಅಂತಾ ಬರಕೊಂಡ ವಿನಂತಿ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

xii. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಅವರು ಎದುರುದಾರರ ಹೇಳಿಕೆ ಅಸಂಬದ್ಧವಾಗಿದ್ದು, ಎದುರುದಾರರು ನಮ್ಮ ಜಮೀನು ಭೂಪರಿವರ್ತನೆ ಕೆಲಸ ಮಾಡಿಕೊಟ್ಟಿದ್ದಕ್ಕಾಗಿ ರೂ. 5,000/- ಲಂಚದ ಹಣವನ್ನು ಕೊಡಲು ಬೇಡಿಕೆ ಇಟ್ಟಿದ್ದು, ಅದರಂತೆ ಇಂದು ದೂರುದಾರರು ಅವರ ಮೊಬೈಲ್‌ಗೆ ಕರೆ ಮಾಡಿದಾಗ ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಗೆ ಬರಲು ಹೇಳಿ ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಯ ವಾಹನ ಪಾರ್ಕಿಂಗ್ ಮಾಡುವ ಸ್ಥಳಕ್ಕೆ ಬಂದು ನಮ್ಮ ಕಾರ್‌ನಲ್ಲಿ ಕುಳಿತು ರೂ. 5,000/- ಲಂಚದ ಹಣವನ್ನು ಖುದ್ದಾಗಿ ಪಡೆದು ತಮ್ಮ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿರುತ್ತಾರೆ. ನಾವೇನು ಒತ್ತಾಯ ರ್ಪುವರ್ವಕವಾಗಿ ಹಣವನ್ನು ಅವರ ಕಿಸೆಯಲ್ಲಿ ಇಟ್ಟಿರುವುದಿಲ್ಲಾ, ನಾನು ಹಣ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ನೊಬೈಲ್‌ದಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು ಅದನ್ನು ಆಲಿಸಿದಾಗ ತಮಗೆ ಈ ಬಗ್ಗೆ ಸತ್ಯಾಸತ್ಯತೆ ಗೊತ್ತಾಗುತ್ತದೆ ಅಂತ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರ ಅಣ್ಣ ಪ್ರಮೋದ ಬೊಂಬಲೆ ಇವರನ್ನು ವಿಚಾರಣೆ ಮಾಡಲಾಗಿ ಅವರೂ ಸಹ ದೂರುದಾರರ ಹೇಳಿಕೆಗೆ ಅನುಸರಿಸಿ ಹೇಳಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ-1-ವಿಜಯಕುಮಾರ, ಇವರನ್ನು ಸಮಜಾಯಿಷಿಯ ಬಗ್ಗೆ ಕೇಳಿದಾಗ,

ಅವರು ಎದುರುದಾರರು ಕಾರ್ ಒಳಗಡೆ ಹಿಂದಿನ ಸೀಟಿನಲ್ಲಿ ನನ್ನ ಪಕ್ಕ ಕುಳಿತು ಹಣವನ್ನು ಬಲಗೈಯಿಂದ ಪಡೆದು ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿದ್ದು, ದೂರುದಾರರು ಯಾವುದೇ ರೀತಿ ಒತ್ತಾಯ ಮಾಡಿರುವುದಿಲ್ಲ ಅಂತ ತಿಳಿಸಿರುತ್ತಾರೆ.

xiii. ನಂತರ ತನಿಖಾಧಿಕಾರಿಗಳು ಪಂಚರುಗಳ ಸಮಕ್ಷಮ ದೂರುದಾರರಿಗೆ ಲಂಚ ಕೊಡುವ ಕಾಲದಲ್ಲಿ ನಡೆದ ಸಂಭಾಷಣೆ, ದೂರುದಾರರ ಅಣ್ಣ ಪ್ರಮೋದ ಬೊಂಬಲೆ ರವರು ಎದುರುದಾರರೊಂದಿಗೆ ಮೊಬೈಲ್ ಮೂಲಕ ನಡೆಸಿದ ಸಂಭಾಷಣೆಗಳು, ಅಂದರೆ ವಿಜಯಪುರ ಎಸಿಬಿ ಠಾಣೆಯಲ್ಲಿ ಒಮ್ಮೆ ಮತ್ತು ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಯ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಮತ್ತೊಮ್ಮೆ ಮಾತನಾಡಿದ ಸಂಭಾಷಣೆಗಳನ್ನು, ಮಾದರಿ ಧ್ವನಿಗಾಗಿ ಪ್ರತಿಲೇಖಗಳನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ, ದೂರುದಾರರಿಂದ ಹಾಗೂ ದೂರುದಾರರ ಅಣ್ಣ ಪ್ರಮೋದ ಬೊಂಬಲೆ ರವರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ ಹಾಗೂ ಎದುರುದಾರರ ಧ್ವನಿಯನ್ನು ಅವರ ಮೇಲಾಧಿಕಾರಿಯಾದ ಶ್ರೀ. ಪ್ರೇಮಸಿಂಗ್ ಗುಜ್ಜು ಪವಾರ, ಗ್ರೇಡ್–2, ತಹಶೀಲ್ದಾರ್ ಬ.ಬಾಗೇವಾಡಿ, ಇವರಿಗೆ ಕೇಳಿಸಿ, ಅದರಲ್ಲಿದ್ದ ಧ್ವನಿಗಳ ಪೈಕಿ, ಒಂದು ಧ್ವನಿ ಎದುರುದಾರರಾದ ಪರಶುರಾಮ ಹುಡೇದ ಇವರದ್ದು ಎಂದು ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಕಚೇರಿಯ ಹಾಜರಾತಿ ಪುಸ್ತಕವನ್ನು ಪಡೆದು ಮಾಹೆ ಮೇ–2019 ತಿಂಗಳ ಹಾಜರಾತಿ ಪುಟದ ನಕಲು ಮಾಡಿಸಿ, ಎದುರುದಾರರ ಮೇಲಾಧಿಕಾರಿಯಾದ ಶ್ರೀ. ಪ್ರೇಮಸಿಂಗ್ ಗುಜ್ಜು ಪವಾರ, ಗ್ರೇಡ್–2, ತಹಶೀಲ್ದಾರ್ ಬ.ಬಾಗೇವಾಡಿ, ಇವರಿಂದ ದೃಢೀಕರಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 06/05/2019ರಂದು ಮಿನಿ ವಿಧಾನ ಸೌಧ ಕಟ್ಟಡದಲ್ಲಿರುವ ಬ.ಬಾಗೇವಾಡಿಗೆ ತಹಶೀಲ್ದಾರ್ ಕಚೇರಿಯ ಸಹಾಯಕ ಚುನಾವಣಾಧಿಕಾರಿಗಳ ಪಡಸಾಲೆ ಕೋಣೆ ನಂ.5 ರಲ್ಲಿ ಕುಳಿತು ಮಧ್ಯಾಹ್ನ 12–45 ಗಂಟೆಯಿಂದ ಸಾಯಂಕಾಲ 18–30 ಗಂಟೆಯವರೆಗೆ ತನಿಖಾಧಿಕಾರಿಗಳು ಟ್ರಾಪ್ ಮಹಜರ್‌ನ್ನು ಉಕ್ತಲೇಖನ ನೀಡಿ ಲ್ಯಾಪ್ ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಲಂಚದ ಹಣವನ್ನು ಜಫ್ತು ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಲಂಚದ ಹಣ ಸ್ವೀಕರಿಸಿದ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

xiv. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ, ದೂರುದಾರರ ಅಣ್ಣ ಪ್ರಮೋದ ಬೊಂಬಲೆ ಹಾಗೂ ಎದುರುದಾರರ ಮಾದರಿ ಧ್ವನಿಗಳಿಗೆ ಹೋಲಿಕೆ

ಆಗುತ್ತದೆ ಎಂಬುದನ್ನು ತೋರಿಸಲು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬರುವುದು ಬಾಕಿ ಇರುತ್ತದೆ. ಎದುರುದಾರರ ಬಲಗೈ ಬೆರಳುಗಳನ್ನು ತೊಳೆಯಿಸಿದ ದ್ರಾವಣ ಹಾಗೂ ಲಂಚದ ಹಣ ಇಟ್ಟಿದ್ದ ಶರ್ಟಿನ ಕಿಸೆಯ ಒಳಭಾಗವನ್ನು ಸಹಾ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದರಲ್ಲಿಯೂ ಸಹಾ ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

xvi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xvii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 21/12/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ವಿಜಯಪುರ ಎಸಿಬಿ ಪೋಲೀಸ್ ಠಾಣೆ ಮೊಕದ್ದಮೆಗೆ ಸಂಬಂಧಪಟ್ಟಂತೆ ವಿಜಯಪುರ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಸ್ಪೆಷಲ್ ಕೇಸ್ ನಂ.03/2021ರಲ್ಲಿ ಪ್ರಕರಣ ದಾಖಲಾಗಿ ವಿಚಾರಣೆ ಹಂತದಲ್ಲಿದ್ದು,

ಈ ರೀತಿ ತನ್ನ ವಿರುದ್ಧ ಎರಡು ಪ್ರಕರಣಗಳು ಒಂದೇ ವಿಷಯ ಮತ್ತು ಆಪಾದನೆಯು ಒಂದೇ ರೀತಿಯಾಗಿದ್ದು, ಎರಡೂ ಪ್ರಕರಣಗಳಲ್ಲಿ ಸಾಕ್ಷಿಗಳು ಮತ್ತು ದಾಖಲೆಗಳು ಒಂದೇ ಆಗಿದ್ದು, ಇಲಾಖಾ ವಿಚಾರಣೆ ಮೊದಲು ನಡೆದಾಗ ಇಲಾಖಾ ವಿಚಾರಣೆಯಲ್ಲಿ ತಾನು ತೆಗೆದುಕೊಳ್ಳುವ ರಕ್ಷಣೆಯು ಕ್ರಿಮಿನಲ್ ಪ್ರಕರಣದಲ್ಲಿ ತನ್ನ ರಕ್ಷಣೆಗೆ ಆತಂಕವಾಗುತ್ತದೆ ಆದಕಾರಣ, ಇಲಾಖಾ ವಿಚಾರಣೆಯನ್ನು ತಡೆಹಿಡಿಯುವುದು ಅತ್ಯವಶ್ಯಕವಾಗಿದೆಯೆಂದು ಹೇಳಿಕೊಂಡು ಇದಕ್ಕೆ ಪೂರಕವಾಗಿ ಸರ್ವೋಚ್ಛನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ. ಪ್ರಕರಣ ಸಂ.03/2021ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಶೀಲಿಸಲಾಗಿ ಮೇಲ್ನೋಟಕ್ಕೆ ಯಾವುದೇ ನಿಖರವಾದ ಹಾಗೂ ಸಂಜ್ಞೆ ತೆಗೆದುಕೊಳ್ಳುವ ಸಂಗತಿಗಳು ಕಂಡುಬರುವುದಿಲ್ಲ. ಘಟನಾವಳಿಯ ಬಗ್ಗೆ ತನಿಖಾಧಿಕಾರಿಗಳು ವಿಚಾರಿಸದೆ ಹಾಗೂ ಅವಲೋಕಿಸದೆ ತಮ್ಮ ಅಂಕಿ ಅಂಶಕ್ಕೋಸ್ಕರ ಸುಳ್ಳು ದೂರನ್ನು ದಾಖಲಿಸಿಕೊಂಡು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಯೊಂದಿಗೆ ಯಾವುದೇ ಮೂಲ ದಾಖಲಾತಿಗಳನ್ನು ಕಳುಹಿಸಿರುವುದಿಲ್ಲ. ಫಿರ್ಯಾದಿಯಲ್ಲಿ ನಮೂದಿಸಿದಂತೆ ತಾನು ದೂರುದಾರರ ಕಡೆಯಿಂದ ತನ್ನ ಅಧಿಕಾರ ವ್ಯಾಮೋಹ ತೋರಿಸಲು ಲಂಚದ ರೂಪದಲ್ಲಿ ಹಣವನ್ನು ಕೇಳೀರುವುದಿಲ್ಲ ಹಾಗೂ ಸ್ವೀಕರಿಸಿರುವುದಿಲ್ಲ. ಈ ಹಿಂದೆ ತನ್ನ ಮೇಲೆ ಯಾವುದೇ ಗುರುತರವಾದ ಕ್ರಿಮಿನಲ್ ಮೊಕದ್ದಮೆಗಳು ತನ್ನ ಸೇವಾ ಮಾಹಿತಿಯಲ್ಲಿ ಲಭ್ಯವಿರುವುದಿಲ್ಲ. ತಾನು ಸಾರ್ವಜನಿಕ ನೌಕರನಾಗಿ ಹಾಗೂ ನಿಷ್ಠಾವಂತ ನೌಕರನಾಗಿ ಸೇವೆ ಸಲ್ಲಿಸಿರುತ್ತೇನೆ. ತನ್ನ ಸೇವಾ ಅವಧಿಯಲ್ಲಿ ಯಾವುದೇ ಕಪ್ಪು ಚುಕ್ಕೆ ಇರುವುದಿಲ್ಲ ಹಾಗೂ ದುರ್ನಡತೆ ಎಸಗಿರುವುದಿಲ್ಲ. ಮೊಕದ್ದಮೆ ಸಂ.03/2021 ಮಾನ್ಯ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವುದರಿಂದ ಸದರಿ ಮೊಕದ್ದಮೆಯು ಮುಗಿಯುವವರೆಗೆ ತನ್ನ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಾರದೆಂದು ವಿನಂತಿಸಿಕೊಂಡು” ತಮ್ಮ ಸಮಜಾಯಿಷಿ ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ

ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

19/4/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**